Cc No.739/2025

**<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.</u>**

<u>ಸಿ.ಸಿ. ನಂಃ739/2025</u>

ಫಿರ್ಯಾದಿಃ ಕರ್ನಾಟಕ ಸರಕಾರ ಪರ: ಸೇಡಂ ಪೋಲೀಸ್ ಠಾಣೆ

//ವಿರುದ್ದ//

ಆರೋಪಿ .: ಗೋವರ್ಧನ ತಂದೆ ಲಕ್ಷ್ಮಣ ರಾಠೋಡ
ವಃ 25 ವರ್ಷ, ಉಃ ಟಿಪ್ಪರ ಚಾಲಕ
ಸಾಃ ಮೇದಕ ತಾಂಡಾ, ತಾಃ ಸೇಡಂ

---

**<u>ಆಪಾದನೆ</u>**

ನಾನು ಶ್ರೀ ಬಾಲು, ಬಿಎ,ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 25-01-2025 ರಂದು ಮುಂಜಾನೆ 06.30 ಗಂಟೆ ಸುಮಾರಿಗೆ ಸೇಡಂ ಪೊಲೀಸ್ ಠಾಣೆಯ ಹದ್ದಿಯ ಹಂದರಕಿ ಗ್ರಾಮದ ನಾಚವಾರ ಗ್ರಾಮಕ್ಕೆ ಹೋಗುವ ಕ್ರಾಸ ಹತ್ತಿರ ಆರೋಪಿ.1 ನೇದ್ದವನು ಟಿಪ್ಪರ ನಂಬರ KA-32 AB-3125 ನೇದ್ದರಲ್ಲಿ ಅಕ್ರಮವಾಗಿ ಕಳ್ಳತನದಿಂದ ಮರಳು ತುಂಬಿಕೊಂಡು ಬರುತ್ತಿರುವಾಗ ಚಾಸಾ.1, 4,5 ನೇದ್ದವರು ಚಾಸಾ2, 3 ರವರ ಸಮಕ್ಷಮದಲ್ಲಿ ದಾಳಿ ಮಾಡಿ ಹಿಡಿದಿದ್ದು ಇರುತ್ತದೆ. ಆರೋಪಿತನು ಟಿಪ್ಪರನ ಚಾಲಕ ಮತ್ತು ಮಾಲಕನಾಗಿದ್ದು ಮತ್ತು ಸರಕಾರಕ್ಕೆ ಯಾವುದೇ ರಾಜಧನ ಕಟ್ಟದೇ ಮತ್ತು ಪರವಾನಿಗೆ ಇಲ್ಲದೇ ಟಿಪ್ಪರನಲ್ಲಿ ಮರಳನ್ನು ಅಕ್ರಮವಾಗಿ ಸಾಗಣೆ ಮಾಡಿದ್ದು ಹಾಗೂ ದಾಳಿ ಕಾಲಕ್ಕೆ ಮರಳು ತುಂಬಿದ ಸದರಿ ವಾಹನವನ್ನು ಜಪ್ತಿಪಡಿಸಿಕೊಂಡಿದ್ದು ಇರುತ್ತದೆ, ಆ ಮೂಲಕ ಆರೋಪಿತರಾದ ನೀವು ಕಲಂ 303(2) ಬಿ.ಎನ್.ಎಸ್. ರಡಿಯಲ್ಲಿ ಅಪರಾಧವನ್ನೆಸಗಿದ್ದು ನನ್ನ ಸಂಜ್ಞೆಯಲ್ಲಿ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ದಿನಾಂಕಃ 12-03-2026 ಪ್ರ.ದ.ನ್ಯಾ.ದಂ. ಸೇಡಂ.

**<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.</u>**

<u>ಸಿ.ಸಿ. ನಂಃ 739/2025</u>

ಫಿರ್ಯಾದಿಃ ಕರ್ನಾಟಕ ಸರಕಾರ ಪರ: ಸೇಡಂ ಪೋಲೀಸ್ ಠಾಣೆ

//ವಿರುದ್ದ//

ಆರೋಪಿ .: ಗೋವರ್ಧನ ತಂದೆ ಲಕ್ಷ್ಮಣ ರಾಠೋಡ
ವಃ 25 ವರ್ಷ, ಉಃ ಟಿಪ್ಪರ ಚಾಲಕ
ಸಾಃ ಮೇದಕ ತಾಂಡಾ, ತಾಃ ಸೇಡಂ

**ಆರೋಪಿತರ ಹೇಳಿಕೆ**

ಪ್ರಃ 1 ಈ ಮೇಲ್ಕಂಡಂತೆ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ

ಪ್ರಃ 2 ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆ ನಡೆಯಬೇಕಾ?

ಉಃ

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ಸಹಿ/-

ದಿನಾಂಕಃ 12-03-2026 ಪ್ರ.ದ.ನ್ಯಾ.ದಂ. ಸೇಡಂ.